ದಿನಾಂಕಃ 03.05.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಕೆ ., ವಕೀಲರಿಂದಃ</u>

ನಾನು ಬಿ.ಎ. ಪದವಿಧರ, ನಾನು **3-4** ಚೆಕ್ ಪ್ರಕರಣಗಳನ್ನು ದಾಖಲು ಮಾಡಿದ್ದೇನೆ. ನಾನು **10** ಕ್ಕೂ ಹೆಚ್ಚು ಚೆಕ್ ಪ್ರಕರಣಗಳು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. **2015** ರಲ್ಲಿ ಮೂರ್ತಿ ಮತ್ತು ಪಿಲಿಪ್ಸ್, **2017** ರಲ್ಲಿ ಶಾಂತ ಮತ್ತು ಸುಮಂತ್ , **2019** ರಲ್ಲಿ ಕವಿತಾ.ಜೆ, **2020** ರಲ್ಲಿ ಆನಂದ.ಪಿ ಮತ್ತು ಭರತ್ ರಾಜ್ ನಂತರ ಯಶ್ವಂತ್ ಮತ್ತು ಫಾತಿಮ.ಬಿ ರವರ ವಿರುದ್ದ ಚೆಕ್ ಪ್ರಕರಣಗಳು ದಾಖಲು ಮಾಡಿದ್ದೇನೆ ಎಂದರೆ ಸರಿ.

**2.** ಮೇಲೆ ಹೇಳಿದ ವ್ಯಕ್ತಿಗಳನ್ನು ಹೊರತು ಪಡಿಸಿ ಬೇರೆ ಯಾರಿಗೂ ಸಹ ನಾನು ಸಾಲ ನೀಡಿರುವುದಿಲ್ಲ. ಮೇಲೆ ಹೇಳಿದ ಪ್ರಕರಣಗಳಲ್ಲಿ **3** ಲಕ್ಷ ಹಾಗು **5** ಲಕ್ಷ ಕ್ಕೂ ಮೇಲ್ಪಟ್ಟಿದ್ದು ಎಂದರೆ ಸರಿಯಲ್ಲ. ಬ್ಯಾಂಕ್ ಅಫ್ ಬರೋಡ ಮೊದಲು ವಿಜಯ ಬ್ಯಾಂಕ್ ಆಗಿತ್ತು. ಅದೇ ಸಮಯಕ್ಕೆ ಎಸ್.ಬಿ.ಐ. ಬ್ಯಾಂಕ್ ನೊಂದಿಗೆ ಎಸ್.ಬಿ.ಎಂ. ಬ್ಯಾಂಕ್ ವಿಲೀನವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಏಪ್ರೀಲ್ **2017** ರಲ್ಲಿ ಎಸ್.ಬಿ.ಎಂ. ಬ್ಯಾಂಕ್, ಎಸ್.ಬಿ.ಐ ಬ್ಯಾಂಕ್ ನೊಂದಿಗೆ ವಿಲೀನ ವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಿಜಯ ಬ್ಯಾಂಕ್ ವಿಲೀನವಾದ ನಂತರ ಬ್ಯಾಂಕ್ ಆಫ್ ಬರೋಡ ಹೆಸರಿನಲ್ಲಿ ಎಲ್ಲಾ ವ್ಯವಹಾರ ಆಗುತಿತ್ತು ಎಂದರೆ ಸರಿ. ಅದೇ ರೀತಿ ಎಸ್.ಬಿ.ಎಂ. ಬ್ಯಾಂಕ್ ನ ವ್ಯವಹಾರ ಗಳೆಲ್ಲವೂ ಎಸ್.ಬಿ.ಐ. ಬ್ಯಾಂಕ್ ನ ಹೆಸರಿನಲ್ಲೆ ಅಗುತ್ತಿತ್ತು ಎಂದರೆ ಗೊತ್ತಿಲ್ಲ.

**3.** ನಾನು ಹಾಜರು ಪಡಿಸಿರುವ ನಿ.ಪಿ.**3** ಮತ್ತು **4** ಹಿಂಬರಹಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎಂದು ನಮೂದು ಇದೆ ಎಂದರೆ ಸರಿ. **2017** ರಲ್ಲಿ ಎಸ್.ಬಿ.ಐ ಬ್ಯಾಂಕ್ ವಿಲೀನವಾಗಿದ್ದು, ಸದರಿ ನಿ.ಪಿ.**3** ಮತ್ತು **4** ಬ್ಯಾಂಕ್ ಹಿಂಬರಹಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳಿಗೂ ನಾನು ನಗದು ರೂಪದಲ್ಲಿಯೇ ಸಾಲ ನೀಡಿದ್ದೇನೆ. **2016** ರಲ್ಲಿ ನೋಟುಗಳು ಅಮಾನ್ಯವಾದಾಗ ಎಷ್ಟು ಹಣವನ್ನು ಪರಿವರ್ತನೆ ಮಾಡಿಕೊಂಡಿದ್ದೀರ ಎಂದರೆ ಸಾಕ್ಷಿ ನಮ್ಮದು ವ್ಯಾಪರ ಕೊಡುವುದು ತೆಗೆದುಕೊಳ್ಳುವುದು ಎಂದು ನುಡಿಯುತ್ತಾರೆ. ಹಾಗಾದರೆ ನೀವು ಬ್ಯಾಂಕ್ ನಲ್ಲಿ ನಿಮ್ಮ ಹಣವನ್ನು ಪರಿವರ್ತನೆ ಮಾಡಿಕೊಂಡಿಲ್ಲವೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹಸುಗಳ

ವ್ಯಾಪಾರ ಮಾಡುತ್ತೇನೆ. ನಿಮ್ಮ ಹಸು ವ್ಯಾಪಾರವನ್ನು ನೊಂದಾಯಿಸಿದ್ದೀರ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹಸು ಸಾಕಾಣೆ ಮಾಡುತ್ತಿದ್ದ ಬಗ್ಗೆ ದಾಖಲಾತಿಗಳು ಇವೆ. ನೀವು ಡೈರಿಗೆ ಹಾಲು ಹಾಕಿದ ಬಗ್ಗೆ ದಾಖಲಾತಿಗಳು ಇದೆಯೇ ಎಂದರೆ ಸಾಕ್ಷಿ ಮಹಿಳಾ ಡೈರಿಗೆ ಹಾಲು ಹಾಕುತ್ತಿದ್ದು ನನ್ನ ಹೆಸರಿನಲ್ಲಿ ದಾಖಲಾತಿಗಳು ಇಲ್ಲ. ನಮ್ಮ ತಾಯಿ ಗೌರಮ್ಮ ಮತ್ತು ನನ್ನ ಹೆಂಡತಿ ಸವಿತ ರವರ ಹೆಸರಿನಲ್ಲಿ ಕೆರೆಮೇಗಲ ದೊಡ್ಡಿ ಕೆ.ಎಂ.ಎಫ್‌ಗೆ ಹಾಲು ಹಾಕುತ್ತಿದ್ದೆ. ನಮ್ಮ ತಾಯಿಯ ಹೆಸರಿನಲ್ಲಿ ಹಾಲು ಹಾಕುವ ವರೆಗೂ ನಗದು ರೂಪದಲ್ಲಿಯೇ ಹಣ ನೀಡುತ್ತಿದ್ದರು. ನಂತರ ನನ್ನ ಪತ್ನಿ ಹೆಸರಿನಲ್ಲಿ ಹಾಲು ಹಾಕುತ್ತಿದ್ದಾಗ ಖಾತೆಗೆ ಜಮೆ ಮಾಡುತ್ತಿದ್ದರು. ಸುಮಾರು **7-8** ವರ್ಷಗಳಿಂದ ಕೆ.ಎಂ.ಎಫ್ ರವರು ಹಣವನ್ನು ನಗದು ರೂಪದಲ್ಲಿ ನೀಡುತ್ತಿಲ್ಲ. ಖಾತೆಗೆ ಹಣ ಜಮೆ ಮಾಡುತ್ತಿದ್ದ ಕಾರಣ ಸದರಿ ಖಾತೆಯ ದಾಖಲಾತಿಗಳು ದೊರೆಯುತ್ತವೆ ಎಂದರೆ ಸರಿ. ನಾನು ಸುಮಾರು **5** ವರ್ಷಗಳಿಂದ ಡೈರಿಗೆ ಹಾಲು ಹಾಕುತ್ತಿಲ್ಲ. ನೀವು ತಿಂಗಳಿಗೆ ಎಷ್ಟು ಹಣ ನಿಮ್ಮ ಹೆಂಡತಿಯ ಖಾತೆಯಿಂದ ಹಣ ಡ್ರಾ ಮಾಡಿಕೊಂಡಿದ್ದೀರ ಎಂದರೆ ಸಾಕ್ಷಿ ತಿಂಗಳಿಗೆ ಡ್ರಾ ಮಾಡುತಿರಲಿಲ್ಲ ಒಂದೇ ಬಾರಿ ಮಾಡಿಕೊಳ್ಳುತ್ತಿದ್ದೆ. ನಾನು ಎಷ್ಟು ಹಣ ಡ್ರಾ ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಈ ಬಗ್ಗೆ ದಾಖಲಾತಿಗಳು ಹಾಜರುಪಡಿಸುತ್ತೇನೆ. ಅರೋಪಿಗೆ ನಾನು ಒಮ್ಮೆ **3** ಲಕ್ಷ ಹಣ ಸಾಲವಾಗಿ ನೀಡಿದ್ದು **15** ದಿನಗಳ ನಂತರ ಸದರಿ ಹಣವನ್ನು ಮರು ಪಾವತಿ ಮಾಡಿದರು.

**4.** ಮೇಲೆ ಹೇಳಿದ ಚಕ್ ಪ್ರಕರಣಗಳಲ್ಲಿ ನಾನು ಯಾರಿಗೂ ಸಹ ಬಡ್ಡಿ ಹಣಕ್ಕೆ ಎಂದು ಸಾಲ ನೀಡಿರಲಿಲ್ಲ. ನೀವು ಆರೋಪಿಗೆ ಬಡ್ಡಿಗಾಗಿ ಹಣ ನೀಡಿದ್ದೀರ ಎಂದರೆ ಇಲ್ಲ. ಆರೋಪಿಗೆ ಹಣ ಸಾಲವಾಗಿ ನೀಡಿದ್ದೇನೆ ಹೇಳಲಾದ ಸಮಯದಲ್ಲಿ ನಿಮ್ಮ ಮತ್ತು ನಿಮ್ಮ ಪತ್ನಿಯ ಖಾತೆಯಿಂದ ಹಣ ಡ್ರಾ ಮಾಡಿದ್ದೀರ ಎಂದರೆ ಇಲ್ಲ.

(ಆರೋಪಿಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

**ಚನ್ನಪಟ್ಟಣ.**